**ಆಕಾಶವಾಣಿ, ಬೆಂಗಳೂರು**

**ರಾಷ್ಟ್ರೀಯ ವಾರ್ತೆಗಳು**

18.04.2025 1310 hrs

********

**ಮುಖ್ಯಾಂಶಗಳು :**

- ಭಗವದ್ಗೀತೆ ಮತ್ತು ನಾಟ್ಯಶಾಸ್ತ್ರ ಯುನೆಸ್ಕೋದ ವಿಶ್ವ ಸ್ಮರಣ ದಾಖಲಾತಿಯಲ್ಲಿ ಸೇರ್ಪಡೆ - ಪ್ರಧಾನಿ ಶ್ಲಾಘನೆ
- ಪಶ್ಚಿಮ ಬಂಗಾಳ ಹಿಂಚಾರದ ವಿರುದ್ಧ ಎನ್‌ಐಎ ತನಿಖೆ ಕೋರಿ ಸಲ್ಲಿಸಿದ್ದ ಅರ್ಜಿ ತಿರಸ್ಕರಿಸಿದ ಕೊಲ್ಕತ್ತಾ ಹೈಕೋರ್ಟ್
- ವಿಶ್ವ ಪರಂಪರೆ ದಿನಾಚರಣೆ; ಸಂರಕ್ಷಿತ ಸ್ಮಾರಕಗಳಿಗೆ ಇಂದು ಉಚಿತ ಪ್ರವೇಶ
- ವಿಶ್ವ ಸ್ಕ್ವಾಷ್ ಚಾಂಪಿಯನ್‌ಶಿಪ್ ಅರ್ಹತಾ ಸುತ್ತು; ಸೆಮಿಫೈನಲ್ ಪ್ರವೇಶಿಸಿದ ಭಾರತದ ವೀರ್ ಛೋತ್ರಾಣಿ
- ಐಪಿಎಲ್ ಟಿ-೨೦ ಕ್ರಿಕೆಟ್; ಇಂದು ರಾಯಲ್ ಚಾಲೆಂಜರ್ಸ್ ಬೆಂಗಳೂರು-ಪಂಜಾಬ್ ಕಿಂಗ್ಸ್ ತಂಡ ಮುಖಾಮುಖಿ

**********

ಭಾರತದ ಆಧ್ಯಾತ್ಮಿಕತೆ ಕಲೆ ಮತ್ತು ಸಂಸ್ಕೃತಿಯ ಪ್ರಮುಖ ಭಾಗವಾದ ಗ್ರಂಥಗಳಾದ ಭಗವದ್ಗೀತೆ ಮತ್ತು ಭರತ ಮುನಿಯ ನಾಟ್ಯಶಾಸ್ತ್ರವನ್ನು ಯುನೆಸ್ಕೋದ ವಿಶ್ವ ಸ್ಮರಣೆ ದಾಖಲಾತಿಯಲ್ಲಿ ಸೇರ್ಪಡೆಗೊಳಿಸಲಾಗಿದೆ. ಈ ಕುರಿತಂತೆ ಕೇಂದ್ರ ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಸಾಮಾಜಿಕ ಮಾಧ್ಯಮ ಪೋಸ್ಟ್‌ಗೆ ಪ್ರತಿಕ್ರಿಯಿಸಿರುವ ಪ್ರಧಾನಿ ನರೇಂದ್ರ ಮೋದಿ ಈ ಸಾಧನೆಯನ್ನು ಶ್ಲಾಘಿಸಿದ್ದಾರೆ. ಇದು ಭಾರತದ ಕಾಲಾತೀತ ಜ್ಞಾನ ಮತ್ತು ಶ್ರೀಮಂತ ಸಂಸ್ಕೃತಿಗೆ ಜಾಗತಿಕ ಮನ್ನಣೆ ಮತ್ತು ಗೀತೆ ಮತ್ತು ನಾಟ್ಯಶಾಸ್ತ್ರವು ಶತಮಾನಗಳಿಂದ ನಾಗರಿಕತೆ ಮತ್ತು ಪ್ರಜ್ಞೆಯನ್ನು ಪೋಷಿಸಿವೆ. ಅವುಗಳ ಒಳನೋಟಗಳು ಜಗತ್ತಿಗೆ ಸ್ಫೂರ್ತಿ ನೀಡುತ್ತಲೇ ಇವೆ ಎಂದು ಪ್ರಧಾನಿ ಸಾಮಾಜಿಕ ಜಾಲತಾಣದಲ್ಲಿ ತಿಳಿಸಿದ್ದಾರೆ.

**********

ಮುರ್ಷಿದಾಬಾದ್ ಜಿಲ್ಲೆಯಲ್ಲಿ ವಕ್ಫ್ ತಿದ್ದುಪಡಿ ಕಾಯ್ದೆಯ ವಿರುದ್ಧ ನಡೆದ ಪ್ರತಿಭಟನೆ ಮತ್ತು ಹಿಂಸಾಚಾರದ ಬಗ್ಗೆ ರಾಷ್ಟ್ರೀಯ ತನಿಖಾ ಸಂಸ್ಥೆ-ಎನ್‌ಐಎ ತನಿಖೆ ಕೋರಿ ಸಲ್ಲಿಕೆಯಾಗಿದ್ದ ಅರ್ಜಿಯನ್ನು ಕೋಲ್ಕತ್ತಾ ಹೈಕೋರ್ಟ್ ತಿರಸ್ಕರಿಸಿದೆ. ನ್ಯಾಯಮೂರ್ತಿಗಳಾದ ಸೌಮೆನ್ ಸೇನ್ ಮತ್ತು ರಾಜಾ ಬಸು ಚೌಧರಿ ಅವರ ವಿಭಾಗೀಯ ಪೀಠ ಮುರ್ಷಿದಾಬಾದ್ ಜಿಲ್ಲೆಯ ಉದ್ವಿಗ್ನ ಪೀಡಿತ ಪ್ರದೇಶಗಳಲ್ಲಿ ಕೇಂದ್ರ ಪಡೆಗಳ ನಿಯೋಜನೆ ಮುಂದುವರೆಯಲಿದೆ ಎಂದು ಆದೇಶಿಸಿದೆ.

**********

ಪಶ್ಚಿಮ ಬಂಗಾಳದ ಬೆಳವಣಿಗೆಗಳ ಕುರಿತು ಬಾಂಗ್ಲಾದೇಶ ಅಧಿಕಾರಿಗಳು ನೀಡಿರುವ ಹೇಳಿಕೆಗಳನ್ನು ಭಾರತ ತಿರಸ್ಕರಿಸಿದೆ. ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್, ಅನಗತ್ಯ ಹೇಳಿಕೆಗಳನ್ನು ನೀಡುವ ಬದಲು, ಬಾಂಗ್ಲಾದೇಶ ತನ್ನದೇ ಆದ ಅಲ್ಪಸಂಖ್ಯಾತರ ಹಕ್ಕುಗಳನ್ನು ರಕ್ಷಿಸುವತ್ತ ಗಮನಹರಿಸುವುದು ಉತ್ತಮ ಎಂದು ಅವರು ಹೇಳಿದರು.

**********

ಜಗತ್ತಿನಾದ್ಯಂತ ಇಂದು ವಿಶ್ವ ಪರಂಪರೆಯ ದಿನವನ್ನು ಆಚರಿಸಲಾಗುತ್ತಿದೆ. ಇದನ್ನು ಅಂತಾರಾಷ್ಟ್ರೀಯ ಸ್ಮಾರಕಗಳು ಮತ್ತು ತಾಣಗಳ ದಿನ ಎಂದೂ ಕರೆಯಲಾಗುತ್ತದೆ., ವಿಪತ್ತು ಮತ್ತು ಸಂಘರ್ಷಗಳ ಬೆದರಿಕೆಯಡಿ ಪರಂಪರೆ ಎಂಬುದು ಈ ವರ್ಷದ ಧ್ಯೇಯ ವಾಕ್ಯವಾಗಿದೆ. ಸಾಂಸ್ಕೃತಿಕ ಮತ್ತು ನೈಸರ್ಗಿಕ ಪರಂಪರೆಯನ್ನು ಗೌರವಿಸಲು ಮತ್ತು ರಕ್ಷಿಸಲು ಪ್ರತಿ ವರ್ಷ ಏಪ್ರಿಲ್ ೧೮ ರಂದು ಈ ದಿನವನ್ನು ಆಚರಿಸಲಾಗುತ್ತದೆ. ಭಾರತವು ಈಗ ವಿಶ್ವ ಪರಂಪರೆಯ ಪಟ್ಟಿಯಲ್ಲಿ ೪೩ ತಾಣಗಳನ್ನು ಮತ್ತು ಯುನೆಸ್ಕೋದ ತಾತ್ಕಾಲಿಕ ಪಟ್ಟಿಯಲ್ಲಿ ೬೨ ಇತರ ತಾಣಗಳನ್ನು ಹೊಂದಿದೆ. ಮೊದಲಿಗೆ ೧೯೮೩ ರಲ್ಲಿ ಆಗ್ರಾ ಕೋಟೆ ಪಟ್ಟಿಯಲ್ಲಿ ಸೇರ್ಪಡೆಗೊಂಡಿತು. ನಂತರ ತಾಜ್ ಮಹಲ್, ಅಜಂತಾ ಗುಹೆಗಳು ಮತ್ತು ಎಲ್ಲೋರಾ ಗುಹೆಗಳು ಸೇರ್ಪಡೆಗೊಂಡವು. ಈ ತಾಣಗಳನ್ನು ಇತಿಹಾಸದ ಸಂಕೇತಗಳಾಗಿ ಮಾತ್ರವಲ್ಲದೆ ಮುಂದಿನ ಪೀಳಿಗೆಗೆ ಕಲಿಕೆಯ ಸ್ಥಳಗಳಾಗಿಯೂ ಸಂರಕ್ಷಿಸಲಾಗಿದೆ. ವಿಶ್ವ ಪರಂಪರೆಯ ದಿನದ ಸಂದರ್ಭದಲ್ಲಿ ಭಾರತೀಯ ಪುರಾತತ್ವ ಸಮೀಕ್ಷೆ, ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ ದೇಶಾದ್ಯಂತ ಎಲ್ಲಾ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ಸಂರಕ್ಷಿತ ಸ್ಮಾರಕಗಳಿಗೆ ಉಚಿತ ಪ್ರವೇಶವನ್ನು ಘೋಷಿಸಿದೆ. ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ಈ ಉಪಕ್ರಮವು ದೇಶದ ಶ್ರೀಮಂತ ಸಾಂಸ್ಕೃತಿಕ ಪರಂಪರೆಯನ್ನು ಅನ್ವೇಷಿಸಲು ಪ್ರವಾಸಿಗರನ್ನು ಪ್ರೋತ್ಸಾಹಿಸುವ ಗುರಿಯನ್ನು ಹೊಂದಿದೆ. ಮೂರು ಸಾವಿರಕ್ಕೂ ಹೆಚ್ಚು ಸ್ಮಾರಕಗಳು ಮತ್ತು ತಾಣಗಳು ತನ್ನ ರಕ್ಷಣೆಯಲ್ಲಿದ್ದು, ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ ದೇಶದ ಐತಿಹಾಸಿಕ ಪರಂಪರೆ ಮತ್ತು ವಾಸ್ತುಶಿಲ್ಪದ ಅದ್ಭುತಗಳೊಂದಿಗೆ ಮತ್ತೆ ಸಂಪರ್ಕ ಸಾಧಿಸಲು ಈ ಅವಕಾಶವನ್ನು ಒದಗಿಸುತ್ತಿದೆ ಎಂದು ಸಚಿವಾಲಯ ತಿಳಿಸಿದೆ.

**********

ಪ್ರಧಾನಿ ನರೇಂದ್ರ ಮೋದಿ ಅವರು ಸಂಸ್ಕೃತಿಯ ಕುರಿತು ಅವರ ಚಿಂತನೆಗಳು ಮತ್ತು ಭಾಷಣಗಳನ್ನು ಒಳಗೊಂಡ ಸಂಕಲನ "ಸಂಸ್ಕೃತಿ ಕಾ ಪಾಂಚವಾ ಅಧ್ಯಾಯ" ಪುಸ್ತಕವನ್ನು ನವದೆಹಲಿಯಲ್ಲಿ ಇಂದು ಬಿಡುಗಡೆ ಮಾಡಲಿದ್ದಾರೆ. ಈ ಪುಸ್ತಕವು ಭಾರತೀಯ ಸಂಸ್ಕೃತಿ, ಸಂಪ್ರದಾಯಗಳು, ಆಧ್ಯಾತ್ಮಿಕ ಮೌಲ್ಯಗಳು ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಎತ್ತಿ ತೋರಿಸುವ ವಿವಿಧ ಸಂದರ್ಭಗಳಲ್ಲಿ ಪ್ರಧಾನಿ ನರೇಂದ್ರ ಮೋದಿ ನೀಡಿದ ಭಾಷಣಗಳ ಸಂಗ್ರಹವಾಗಿದೆ. ಈ ಪುಸ್ತಕವನ್ನು ಜುನಾ ಅಖಾಡದ ಮುಖ್ಯಸ್ಥ ಆಚಾರ್ಯ ಮಹಾಮಂಡಲೇಶ್ವರ ಪೂಜ್ಯ ಸ್ವಾಮಿ ಅವಧೇಶಾನಂದ ಗಿರಿ ಮಹಾರಾಜ್ ಅವರು ಔಪಚಾರಿಕವಾಗಿ ಬಿಡುಗಡೆ ಮಾಡಲಿದ್ದಾರೆ. ಪುಸ್ತಕದ ಮುನ್ನುಡಿಯನ್ನು ರಾಮ್ ಬಹದ್ದೂರ್ ರಾಯ್ ಬರೆದಿದ್ದು, ಸಂಕಲನವನ್ನು ಡಾ. ಪ್ರಭಾತ್ ಓಜಾ ಮಾಡಿದ್ದಾರೆ. ಈ ಪುಸ್ತಕವನ್ನು ಪ್ರಭಾತ್ ಪ್ರಕಾಶನ ಪ್ರಕಟಿಸಿದೆ.

**********

ರಕ್ಷಣಾ ಕಾರ್ಯದರ್ಶಿ ರಾಜೇಶ್ ಕುಮಾರ್ ಸಿಂಗ್ ನಿನ್ನೆ ಭಾರತ-ಬ್ರಿಟನ್ ರಕ್ಷಣಾ ಉದ್ಯಮ ದುಂಡುಮೇಜಿನ ಸಭೆಯಲ್ಲಿ ಪ್ರಮುಖ ಭಾಷಣ ಮಾಡಿದರು. ಯುಕೆ-ಇಂಡಿಯಾ ವ್ಯಾಪಾರ ಮಂಡಳಿ ಆಯೋಜಿಸಿದ್ದ ದುಂಡುಮೇಜಿನ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ನೌಕಾ ವ್ಯವಸ್ಥೆಗಳು, ಡ್ರೋನ್‌ಗಳು, ಕಣ್ಗಾವಲು, ರಕ್ಷಣಾ ಸ್ಥಳ ಮತ್ತು ವಾಯುಯಾನದಂತಹ ಪ್ರಮುಖ ರಕ್ಷಣಾ ಕ್ಷೇತ್ರಗಳಲ್ಲಿ ಭಾರತೀಯ ನವೋದ್ಯಮಗಳ ಬೆಳೆಯುತ್ತಿರುವ ಸಾಮರ್ಥ್ಯಗಳನ್ನು ಎತ್ತಿ ತೋರಿಸಿದರು. ವೆಚ್ಚ-ಪರಿಣಾಮಕಾರಿ ಮತ್ತು ಅತ್ಯಾಧುನಿಕ ಪರಿಹಾರಗಳನ್ನು ನೀಡುವ ಸಾಮರ್ಥ್ಯವನ್ನು ಗಮನಿಸಿ, ನಾವೀನ್ಯಕಾರರೊಂದಿಗೆ ಪಾಲುದಾರಿಕೆಯನ್ನು ಅನ್ವೇಷಿಸಲು ಅವರು ಬ್ರಿಟನ್ ಕಂಪನಿಗಳಿಗೆ ಕರೆ ನೀಡಿದರು. ಭವಿಷ್ಯದ ಉದ್ಯಮ ಸಹಕಾರಕ್ಕೆ ದಿಕ್ಸೂಚಿಯಾಗಿ, ಕೈಗಾರಿಕಾ ಸಹಕಾರ ಮಾರ್ಗಸೂಚಿಯನ್ನು ಅಭಿವೃದ್ಧಿಪಡಿಸಲು ಭಾರತ, ಬ್ರಿಟನ್ ರಕ್ಷಣಾ ಸಚಿವಾಲಯದೊಂದಿಗೆ ನಿಕಟವಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ರಕ್ಷಣಾ ಕಾರ್ಯದರ್ಶಿ ಹೇಳಿದರು. ಉತ್ತರ ಪ್ರದೇಶ ಮತ್ತು ತಮಿಳುನಾಡಿನಲ್ಲಿ ರಕ್ಷಣಾ ಕಾರಿಡಾರ್‌ಗಳಲ್ಲಿ ಹೂಡಿಕೆ ಮಾಡಲು ಅವರು ಬ್ರಿಟನ್ ಸಂಸ್ಥೆಗಳನ್ನು ಆಹ್ವಾನಿಸಿದರು. ಈ

ಭೇಟಿಯ ಸಮಯದಲ್ಲಿ, ರಾಜೇಶ್ ಕುಮಾರ್ ಸಿಂಗ್ ಖಾಯಂ ಅಧೀನ ರಕ್ಷಣಾ ಕಾರ್ಯದರ್ಶಿ ಡೇವಿಡ್ ವಿಲಿಯಮ್ಸ್ ಅವರೊಂದಿಗೆ ೨೪ ನೇ ಭಾರತ-ಬ್ರಿಟನ್ ರಕ್ಷಣಾ ಸಮಾಲೋಚನಾ ಗುಂಪು ಸಭೆಯ ಸಹ-ಅಧ್ಯಕ್ಷತೆ ವಹಿಸಿದ್ದರು. ಇದರ ಜೊತೆಗೆರಕ್ಷಣಾ ಕಾರ್ಯದರ್ಶಿಯವರು ಬ್ರಿಟನ್ ರಾಷ್ಟ್ರೀಯ ಭದ್ರತಾ ಸಲಹೆಗಾರ ಜೊನಾಥನ್ ಪೊವೆಲ್ ಅವರೊಂದಿಗೆ ಸಂವಾದ ನಡೆಸಿದರು.

**********

ಜೇಮ್ಸ್ ವೆಬ್ ಬಾಹ್ಯಾಕಾಶ ಟೆಲಿಸ್ಕೋಪ್ ಮೂಲಕ ವಿಜ್ಞಾನಿಗಳು ತಂಡವು ಭೂಮಿಯಿಂದ ೧೨೦ ಬೆಳಕಿನ ವರ್ಷಗಳ ದೂರದಲ್ಲಿರುವ ಒಂದು ಬಾಹ್ಯ ಗ್ರಹವಾದ K2-18b ಯ ವಾತಾವರಣದಲ್ಲಿ ರಾಸಾಯನಿಕ ಜೈವಿಕ ಗುರುತುಗಳನ್ನು ಗುರುತಿಸಿದೆ. ಕೇಂಬ್ರಿಡ್ಜ್ ವಿಶ್ವವಿದ್ಯಾಲಯದ ಖಗೋಳ ವಿಜ್ಞಾನ ಸಂಸ್ಥೆಯ ಪ್ರೊಫೆಸರ್ ನಿಕ್ಕು ಮಧುಸೂಧನ್ ನೇತೃತ್ವದ ತಂಡ, ಗ್ರಹದ ವಾತಾವರಣದಲ್ಲಿ ಸೂಕ್ಷ್ಮಜೀವಿಗಳಂತಹ ಭೂಮಿಯ ಮೇಲಿನ ಸರಳ ಜೀವಿಗಳಿಂದ ಉತ್ಪತ್ತಿಯಾಗುವ ಅಣುಗಳನ್ನು ಕಂಡುಹಿಡಿದಿದೆ. ಈ ಆವಿಷ್ಕಾರವು ವಿಶೇಷವಾಗಿದ್ದರೂ, ಜೀವಿಗಳು ಇವೆ ಎನ್ನುವುದಕ್ಕೆ ನಿರ್ಣಾಯಕ ಪುರಾವೆಯಾಗಿಲ್ಲ. ಬದಲಿಗೆ ಜೈವಿಕ ಚಟುವಟಿಕೆ ಇರುವುದನ್ನು ಸೂಚಿಸುತ್ತದೆ ಎಂದು ಪ್ರೊಫೆಸರ್ ಮಧುಸೂಧನ್ ಹೇಳಿದ್ದಾರೆ. ನಾಸಾದ ಜೇಮ್ಸ್ ವೆಬ್ ಬಾಹ್ಯಾಕಾಶ ಟೆಲಿಸ್ಕೋಪ್, K2-18b ನಲ್ಲಿ ಜೀವಕ್ಕೆ ಸಂಬಂಧಿಸಿದ ರಾಸಾಯನಿಕಗಳನ್ನು ಪತ್ತೆಹಚ್ಚಿರುವುದು ಇದು ಎರಡನೇ ಬಾರಿಯಾಗಿದೆ. ಸಂಶೋಧಕರು ಈ ಸಂಶೋಧನೆಗಳು ಹಿಂದಿನವುಗಳಿಗಿಂತ ಹೆಚ್ಚು ಭರವಸೆ ನೀಡುತ್ತವೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಆದಾಗ್ಯೂ, ಕೇಂಬ್ರಿಡ್ಜ್ ತಂಡ ಮತ್ತು ಸ್ವತಂತ್ರ ಖಗೋಳಶಾಸ್ತ್ರಜ್ಞರು ಈ ಫಲಿತಾಂಶಗಳನ್ನು ದೃಢೀಕರಿಸಲು ಹೆಚ್ಚಿನ ದತ್ತಾಂಶ ಮತ್ತು ಅವಲೋಕನಗಳು ಅಗತ್ಯವಿದೆ ಎಂದು ಎಚ್ಚರಿಸಿದ್ದಾರೆ.

**********

ಕ್ರಿಶ್ಚಿಯನ್ ಕ್ಯಾಲೆಂಡರ್‌ನಲ್ಲಿ ಅತ್ಯಂತ ಪವಿತ್ರ ದಿನಗಳಲ್ಲಿ ಒಂದಾದ ಇಂದು ಪ್ರಪಂಚದಾದ್ಯಂತದ ಕ್ರಿಶ್ಚಿಯನ್ನರು ಶುಭ ಶುಕ್ರವಾರವನ್ನು ಆಚರಿಸುತ್ತಿದ್ದಾರೆ. ಯೇಸುಕ್ರಿಸ್ತನ ಶಿಲುಬೆಗೇರಿಸುವಿಕೆಯನ್ನು ಗುರುತಿಸುವ ಶುಭ ಶುಕ್ರವಾರವು ಶೋಕ, ಪ್ರತಿಬಿಂಬ ಮತ್ತು ಆಧ್ಯಾತ್ಮಿಕ ಭಕ್ತಿಯ ದಿನವಾಗಿದೆ. ಕ್ರಿಶ್ಚಿಯನ್ ಸಮುದಾಯದವರೇ ಹೆಚ್ಚಿರುವ ರಾಜ್ಯವಾದ ನಾಗಾಲ್ಯಾಂಡ್, ಭಕ್ತಿ ಮತ್ತು ಸಾಮೂಹಿಕ ಭಾಗವಹಿಸುವಿಕೆಯೊಂದಿಗೆ ಶುಭ ಶುಕ್ರವಾರವನ್ನು ಆಚರಿಸುತ್ತಿದೆ. ನಾಗಾಲ್ಯಾಂಡ್‌ನಾದ್ಯಂತದ ಚರ್ಚ್‌ಗಳು ವಿಶೇಷ ಪ್ರಾರ್ಥನಾ ಸೇವೆಗಳು ಮತ್ತು ಉಪವಾಸವನ್ನು ನಡೆಸುತ್ತಿವೆ. ತಮ್ಮ ಪಾಪಗಳಿಗೆ ಕ್ಷಮೆಯಾಚಿಸಲು ಮತ್ತು ಕ್ರಿಸ್ತನ ತ್ಯಾಗಕ್ಕೆ ಕೃತಜ್ಞತೆಯನ್ನು ವ್ಯಕ್ತಪಡಿಸಲು ಇಂದು ಕ್ರಿಶ್ಚಿಯನ್ ಬಾಂಧವರು ಚರ್ಚ್‌ಗಳಲ್ಲಿ ಒಟ್ಟುಗೂಡುತ್ತಾರೆ. ಶುಭ ಶುಕ್ರವಾರದ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ದೇಶದ ಜನತೆಗೆ ಶುಭ ಹಾರೈಸಿದ್ದಾರೆ. ಈ ದಿನ ದಯೆ, ಸಹಾನುಭೂತಿಯನ್ನು ಪಾಲಿಸಲು ಮತ್ತು ಯಾವಾಗಲೂ ವಿಶಾಲ ಹೃದಯದಿಂದಿರಲು ತಮಗೆ ಪ್ರೇರಣೆ ನೀಡುತ್ತದೆ ಎಂದು ಪ್ರಧಾನಿ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

**********

ಇಂದು ಒಂಬತ್ತನೇ ಸಿಖ್ ಗುರು, ಗುರು ತೇಜ್ ಬಹದ್ದೂರ್ ಸಾಹಿಬ್ ಅವರ ಪ್ರಕಾಶ್ ಪರ್ವ ದಿನ. ೧೬೨೧ ರಲ್ಲಿ ಅಮೃತಸರದಲ್ಲಿ ಜನಿಸಿದ ಅವರು ಆರನೇ ಸಿಖ್ ಗುರು ಶ್ರೀ ಗುರು ಹರಗೋಬಿಂದ್ ಸಾಹಿಬ್ ಜಿ ಅವರ ಕಿರಿಯ ಮಗ. ತತ್ವಬದ್ಧ ಮತ್ತು ನಿರ್ಭೀತ ಯೋಧ ಎಂದು ಪ್ರಸಿದ್ಧರಾದ ಅವರು ಒಬ್ಬ ಆಧ್ಯಾತ್ಮಿಕ ವಿದ್ವಾಂಸ ಮತ್ತು ಕವಿಯಾಗಿದ್ದರು."ಹಿಂದ್ ದಿ ಚಾದರ್ - ಶ್ರೀ ಗುರು ತೇಜ್ ಬಹದ್ದೂರ್. ಹಿಂದೂಸ್ತಾನದಲ್ಲಿ ಔರಂಗಜೇಬನ ಆಳ್ವಿಕೆಯಲ್ಲಿ ಹಿಂದೂಗಳ ಧಾರ್ಮಿಕ ಸ್ವಾತಂತ್ರ್ಯವನ್ನು ರಕ್ಷಿಸುವಲ್ಲಿ ಅವರ ಶೌರ್ಯ ಮತ್ತು ತ್ಯಾಗಕ್ಕಾಗಿ ಅವರನ್ನು 'ಹಿಂದ್ ದಿ ಚಾದರ್' ಎಂದು ಕರೆಯಲಾಗುತ್ತದೆ.

ಧಾರ್ಮಿಕ ಸ್ವಾತಂತ್ರ್ಯದ ರಕ್ಷಣೆಗೆ ನೀಡಿದ ಕೊಡುಗೆಗೆ ಅವರನ್ನು ಇಂದಿಗೂ ಸ್ಮರಿಸಲಾಗುತ್ತದೆ. ಇಂದು, ಶ್ರೀ ಅಖಂಡ್ ಪಥ್ ಸಾಹಿಬ್ ಅನ್ನು ಗುರು ಜಿ ಅವರ ಜನ್ಮಸ್ಥಳ ಗುರುದ್ವಾರ ಗುರು ಕೆ ಮಹಲ್‌ನಲ್ಲಿ ಅರ್ಪಿಸಲಾಗುವುದು. ಸಂಜೆ ದೀಪಮಾಲೆ ಪ್ರದರ್ಶಿಸಲಾಗುತ್ತದೆ.

**********

ಮಲೇಷ್ಯಾದ ಕೌಲಾಲಂಪುರದಲ್ಲಿ ನಡೆಯುತ್ತಿರುವ ವಿಶ್ವ ಸ್ಕ್ವಾಷ್ ಚಾಂಪಿಯನ್ ಶಿಪ್ ಏಷ್ಯಾ ಅರ್ಹತಾ ಸುತ್ತಿನ ಪಂದ್ಯಾವಳಿಯಲ್ಲಿ ಭಾರತದ ವೀರ್ ಚೊತ್ರಾಣಿ ಸೆಮಿಫೈನಲ್ ಪ್ರವೇಶಿಸಿದ್ದಾರೆ. ಇಂದು ನಡೆದ ಕ್ವಾಟರ್‌ಫೈನಲ್ ಪಂದ್ಯದಲ್ಲಿ ಭಾರತದ ವೀರ್‌ಚೋತ್ರಾಣಿ ಮಲೇಷ್ಯಾದ ಮೊಹಮ್ಮದ್ ಸ್ಯಾಫಿಕ್ ಕಮಲ್ ವಿರುದ್ಧ ೯-೧೧, ೧೧-೬, ೧೧-೬, ೧೧-೭ ಅಂತರದಲ್ಲಿ ಗೆಲುವು ಸಾಧಿಸಿ ಸೆಮಿಫೈನಲ್ ಹಂತದಲ್ಲಿ ಸ್ಥಾನಪಡೆದಿದೆ.

**********

ಬೆಂಗಳೂರಿನ ಎಂ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಇಂದು ನಡೆಯಲಿರುವ ಐಪಿಎಲ್ ಟಿ-೨೦ ಕ್ರಿಕೆಟ್ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ, ಪಂಜಾಬ್ ಕಿಂಗ್ಸ್ ತಂಡವನ್ನು ಎದುರಿಸಲಿದೆ. ಪಂದ್ಯ ರಾತ್ರಿ ೭:೩೦ಕ್ಕೆ ಆರಂಭವಾಗಲಿದೆ. ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ನಿನ್ನೆ ರಾತ್ರಿ ನಡೆದ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ತಂಡ, ಸನ್‌ರೈಸರ್ಸ್ ಹೈದರಾಬಾದ್ ತಂಡವನ್ನು ನಾಲ್ಕು ವಿಕೆಟ್‌ಗಳಿಂದ ಸೋಲಿಸಿತು.

**********

ಸೌದಿ ಅರೇಬಿಯಾದ ದಮ್ಮಾಮ್‌ನಲ್ಲಿ ನಡೆದ ಏಷ್ಯನ್ ಯುವ ಚಾಂಪಿಯನ್‌ಶಿಪ್‌ನಲ್ಲಿ ನಡೆದ ೧೮ ವರ್ಷದೊಳಗಿನವರ ಮಹಿಳೆಯರ ೧೦೦ ಮೀಟರ್ ಹರ್ಡಲ್ಸ್‌ನಲ್ಲಿ ಭಾರತದ ಶೌರ್ಯ ಅಂಬುರೆ ಕಂಚಿನ ಪದಕ ಗೆದ್ದಿದ್ದಾರೆ. ೧೫ ವರ್ಷದ ಶೌರ್ಯ ೧೩.೮೦ ಸೆಕೆಂಡುಗಳಲ್ಲಿ ಗುರಿ ತಲುಪುವ ಮೂಲಕ ಸ್ಥಾನ ಪಡೆದರು. ಇದು ಹಲವು ದಿನಗಳಲ್ಲಿ ಅವರ ಸತತ ಎರಡನೇ ವೈಯಕ್ತಿಕ ಅತ್ಯುತ್ತಮ ಸಾಧನೆಯಾಗಿದೆ. ಚೀನಾದ ಬಾವೊ ಇನ್‌ಶಿನ್ ೧೩.೭೧ ಸೆಕೆಂಡುಗಳಲ್ಲಿ ಗುರಿ ತಲುಪುವ ಮೂಲಕ ಚಿನ್ನ ಗೆದ್ದರೆ, ಚೀನಾದ ಸಹ ಕ್ರೀಡಾಪಟು ಹಿ ಯಿಹುಯಿ ೧೩.೭೬ ಸೆಕೆಂಡುಗಳಲ್ಲಿ ಗುರಿ ತಲುಪುವ ಮೂಲಕ ಬೆಳ್ಳಿ ಪದಕ ಗೆದ್ದರು.